

ಎಲ್ಲರನ್ನೂ ಔಟ್ ಮಾಡಿ ಅರ್ಧ ನಿಮಿಷದಲ್ಲಿ ಮರಳಿಬಂದ. ಎರಡನೆಯ ಸುತ್ತಿನಲ್ಲಿ ಅವನನ್ನೇ ಮೊದಲ ಪ್ರವೇಶವಾಗಿ ಕಳುಹಿಸಿದರು. ಅವನು ಒಳನುಗ್ಗಿದವನೇ ಎರಡನೇ ಪಟ್ಟೆಯನ್ನು ದಾಟಿ ಮತ್ತೆ ಕೈ ಚಾಚಿದ. ಎಲ್ಲರೂ ಸೇರಿ ಅವನನ್ನು ಹಿಡಿದುಕೊಂಡರು. ಅವನು ಕೈ ಚಾಚಿದ, ನಡುವಣ ಪಟ್ಟೆ ಸಿಕ್ಕುಬಿಟ್ಟಿತು. ಎಲ್ಲರೂ ಔಟ್! 'ಬಿ' ತಂಡದವರು ಮಂಕಾದರು. ಅಷ್ಟು ದೂರ ಹೇಗೆ ಕೈಚಾಚಿದ ಎಂದು ಅವರಿಗೆ ಅರ್ಥವಾಗಲಿಲ್ಲ. ಇದೆಲ್ಲ ಮಿಂಚಿನ ವೇಗದಲ್ಲಿ ನಡೆದಿದ್ದುದರಿಂದ ಯಾರಿಗೂ ಗೊತ್ತಾಗಲಿಲ್ಲ. ಪಿ.ಟಿ. ಮಾಸ್ತರಿಗೆ 'ಬಿ' ತಂಡ ಪ್ರಿಯವಾಗಿತ್ತು. ಆದರೆ, ಒಂದೂ ಪಾಯಿಂಟ್ ಗಳಿಸದೇ ಅದು ಸೋತಾಗ ಅವರಿಗೆ ಏನು ಮಾಡಬೇಕೆಂದು ತೋಚಲಿಲ್ಲ. ಆಟ ಮುಗಿದಾಗ ಎಲ್ಲರೂ ಅಜಿತನ ಬೆನ್ನು ತಟ್ಟುವವರೇ. ಅವನು 'ಒನ್ ಮ್ಯಾನ್ ಆರ್ಮಿ' ರೀತಿಯಲ್ಲಿ ಆಟವಾಡಿದ. ಮುಂದೆ ಅವನನ್ನೇ ಕ್ಯಾಪ್ಟನ್ ಮಾಡಿದರು. ಜಿಲ್ಲಾ ಮಟ್ಟದ ಕಬಡ್ಡಿ ಟೂರ್ನಮೆಂಟ್‌ನಲ್ಲಿ ಅಜಿತನ ತಂಡವೇ ಗೆದ್ದು ಪರ್ಯಾಯ ಪಾರಿತೋಷಕವನ್ನು ಪಡೆಯಿತು.

ಅಜಿತ್ ಕಾಲೇಜಿಗೆ ಸೇರಿಕೊಂಡಾಗ ಕ್ರಿಕೆಟ್ ತಂಡಕ್ಕೆ ಸೇರಲು ಬಹಳ ಪ್ರಯತ್ನಮಾಡಿದ. ಆದರೆ, ಅಲ್ಲಿದ್ದ ಹಳೆ ಹುಲಿಗಳು ಅವನಿಗೆ ಅವಕಾಶ ಕೊಡಲಿಲ್ಲ. ಕೊನೆಗೆ ಫೀಲ್ಡಿಂಗ್‌ಗಾದರೂ ಅವಕಾಶ ಕೊಡಬೇಕು ಎಂದು ಬೇಡಿಕೊಂಡಮೇಲೆ ಅವನ ಆಸೆ ಈಡೇರಿತು. ಮೊದಲ ಸರದಿಯಲ್ಲಿ ಅಜಿತ್ ಇದ್ದ 'ಎ' ತಂಡವೇ ಫೀಲ್ಡಿಂಗ್. ಅಜಿತ್‌ನನ್ನು ಬೌಂಡರಿಗೆ ಸಮೀಪ ನಿಲ್ಲಿಸಿದರು. ಆಟ ಪ್ರಾರಂಭವಾಯಿತು. 'ಬಿ' ತಂಡದವರು ಚೆನ್ನಾಗಿ ಚಚ್ಚುತ್ತಿದ್ದರು. ಒಂದು ಸಲ ಅಜಿತ್ ನಿಂತಿದ್ದ ದಿಕ್ಕಿನಲ್ಲಿ ಸಿಕ್ಸರ್ ಬಾರಿಸಿದಾಗ ಸುಮಾರು ಹದಿನೈದು ಅಡಿ ಎತ್ತರದಲ್ಲಿ ಹೋಗುತ್ತಿದ್ದ ಚೆಂಡನ್ನು ಕೈಚಾಚಿ ಹಿಡಿದ. ಅಂಪೈರ್ ಔಟ್ ಕೊಡುತ್ತಿದ್ದಂತೆ ಎಲ್ಲರೂ ಮೂಕವಿಸ್ಮಿತರಾದರು. 'ಎ' ತಂಡದ ನಾಯಕನಂತೂ ಅಜಿತನ ಬೆನ್ನುಮುರಿಯುವಂತೆ ಚಪ್ಪರಿಸಿದ. ಆ ಒಂದು ಕ್ಯಾಚ್ ಅಜಿತನ ಅದೃಷ್ಟವನ್ನೇ ಬದಲಾಯಿಸಿತು. ತನ್ನ ಎಡ ಬಲ ಮತ್ತು ಮೇಲ್ಭಾಗದಲ್ಲಿ ಹತ್ತು ಹದಿನೈದು ಅಡಿ ಅಂತರದಲ್ಲಿ ಎಷ್ಟೇ ವೇಗವಾಗಿ ಚೆಂಡು ಹೋಗಲಿ, ಅಜಿತ ತನ್ನ ಕೈಚಾಚಿ ಹಿಡಿದುಬಿಡುತ್ತಿದ್ದ. ಎದುರು ತಂಡಕ್ಕಂತೂ ಅದನ್ನು ನಂಬಲಿಕ್ಕೆ